# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 747

ಸದಸ್ಯರ ಹೆಸರು : ಶ್ರೀ.ಕೆ.ವಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 17.12.2018

ಉತ್ತರಿಸುವ ಸಚಿವರು : ಪಶು ಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು. |
| ಆ) | ರಾಜ್ಯದಲ್ಲಿ ಮಂಜೂರಾದ ಪಶು ವೈದ್ಯಾಧಿಕಾರಿಗಳ ಒಟ್ಟು ಹುದ್ದೆ ಮತ್ತು ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು: | ರಾಜ್ಯದಲ್ಲಿ ಮಂಜೂರಾದ ಪಶು ವೈದ್ಯಾಧಿಕಾರಿಗಳ ಒಟ್ಟು ಹುದ್ದೆಗಳ ವಿವರ ಈ ಕೆಳಕಂಡಂತಿದೆ. |

| ಕ್ರ.ಸಂ | ಹುದ್ದೆ | ಮ | ಭರ್ತಿ | ಖಾಲಿ |
|---|---|---|---|---|
| 1. | ಜಂಟಿ ನಿರ್ದೇಶಕರು | 9 | 8 | 1 |
| 2. | ಉಪ ನಿರ್ದೇಶಕರು | 90 | 46 | 44 |
| 3. | ಸಹಾಯಕ ನಿರ್ದೇಶಕರು | 176 | 121 | 55 |
| 4. | ಮುಖ್ಯ ಪಶುವೈದ್ಯಾಧಿಕಾರಿಗಳು/ ಹಿರಿಯ ಪಶುವೈದ್ಯಾಧಿಕಾರಿಗಳು/ ಪಶುವೈದ್ಯಾಧಿಕಾರಿಗಳು | 3141 | 2111 | 1030 |
| | ಒಟ್ಟು | 3416 | 2286 | 1130 |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಇ) | ಪಶುವೈದ್ಯರ ಕೊರತೆಯಿದ್ದರೂ ಸಹ ಇವರು ಅನ್ಯ ಇಲಾಖೆಯ ಆಡಳಿತಾತ್ಮಕ ಹುದ್ದೆಗಳಿಗೆ ನಿಯೋಜನೆ ಮೇಲೆ ತೆರಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ನಿಯೋಜನೆ ಮೇಲೆ ಬೇರೆ ಇಲಾಖೆಗಳಲ್ಲಿ ಆಡಳಿತಾತ್ಮಕ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶುವೈದ್ಯರ ನಿಯೋಜನೆಯನ್ನು ರದ್ದು ಪಡಿಸಿ, ಇಲಾಖೆಯ ಪಶುಚಿಕಿತ್ಸಾಲಯ ಮತ್ತು ಪಶು ಆಸ್ಪತ್ರೆಗಳಲ್ಲಿರುವ ಖಾಲಿ ಇರುವ ಹುದ್ದೆಗಳಿಗೆ ಸ್ಥಳ ನಿಯುಕ್ತಿಗೊಳಿಸಿದೆ. |
| ಈ) | ಬಂದಿದ್ದಲ್ಲಿ, ಆಡಳಿತಾತ್ಮಕ ಹುದ್ದೆಗಳಿಗೆ ನಿಯೋಜನೆ ಮೇಲೆ ತೆರಳಿದ ಪಶುವೈದ್ಯರ ಸಂಖ್ಯೆಯೆಷ್ಟು: | ಆಡಳಿತಾತ್ಮಕ ಹುದ್ದೆಗಳಿಗೆ ನಿಯೋಜನೆ ಮೇಲೆ ತೆರಳಿದ ಪಶುವೈದ್ಯರ ಸಂಖ್ಯೆ ಈ ಕೆಳಕಂಡಂತಿದೆ. |

| ಕ್ರ.ಸಂ | ಹುದ್ದೆ | ಸಂಖ್ಯೆ | ಷರಾ |
|---|---|---|---|
| 1. | ಜಂಟಿ ನಿರ್ದೇಶಕರು | 01 | ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಉಪಕಾರ್ಯದರ್ಶಿ ಹುದ್ದೆಗೆ ನಿಯೋಜಿಸಲಾಗಿದೆ, |
| 2. | ಸಹಾಯಕ ನಿರ್ದೇಶಕರು | 01 | ಭಾರತ ಸರ್ಕಾರದ ಮಾನ್ಯ ಸಾಂಖ್ಯಿಕ ಸಚಿವರ ಅಪರ ಆಪ್ತ ಕಾರ್ಯದರ್ಶಿ ಹುದ್ದೆಗೆ ನಿಯೋಜಿಸಲಾಗಿದೆ. |
| | | 01 | ಯೋಜನೆ ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ನಿಯೋಜಿಸಲಾಗಿದೆ. |

| | | | | | |
|---|---|---|---|---|---|
| | | 3. | ಮುಖ್ಯ ಪಶುವೈದ್ಯಾಧಿಕಾರಿಗಳು /ಹಿರಿಯ ಪಶುವೈದ್ಯಾಧಿಕಾರಿಗಳು /ಪಶುವೈದ್ಯಾಧಿಕಾರಿಗಳು | 21 | ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಣಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಇಲಾಖೆಯ 21 ಪಶುವೈದ್ಯರುಗಳನ್ನು ಇಲಾಖೆಗೆ ಹಿಂಪಡೆಯಲು ಆದೇಶ ಹೊರಡಿಸಲಾಗಿರುತ್ತದೆ. |
| | | | ಒಟ್ಟು | 24 | |
| ಉ) | ನಿಯೋಜನೆ ಮೇಲೆ ತೆರಳಿರುವ ಪಶು ವೈದ್ಯಾಧಿಕಾರಿಗಳ ನಿಯೋಜನೆ ಆದೇಶವನ್ನು ರದ್ದು ಪಡಿಸಿ ಮಾತೃ ಇಲಾಖೆಗೆ ವಾಪಸ್ಸು ಪಡೆಯುವ ಪ್ರಸಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು, ಸರ್ಕಾರದ ಆದೇಶ ಸಂಖ್ಯೆ: ಪಸಂಮೀ 156 ಪಅಸೇ 2018 ಮತ್ತು ಆದೇಶ ಸಂಖ್ಯೆ: ಪಸಂಮೀ 173 ಪಸಸೇ 2015 (ಭಾಗ-2) ದಿನಾಂಕ: 12-10-2018 ರಲ್ಲಿ ಇಲಾಖಾ ಕಾರ್ಯಚಟುವಟಿಕೆಗಳಿಗೆ ಪೂರಕವಲ್ಲದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳ ಹುದ್ದೆಗಳಲ್ಲಿ ಹಾಗೂ ನಗರಾಭಿವೃದ್ಧಿ ಇಲಾಖೆಯಲ್ಲಿ ನಿಯೋಜನೆ ಮೇಲೆ ಆಯುಕ್ತರ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿಗಳು/ಹಿರಿಯಪಶುವೈದ್ಯಾಧಿಕಾರಿಗಳು/ ಪಶುವೈದ್ಯಾಧಿಕಾರಿಗಳ ಒಟ್ಟು 21 ಪಶುವೈದ್ಯರ ನಿಯೋಜನೆಯನ್ನು ರದ್ದುಪಡಿಸಿ ಪಶುವೈದ್ಯಾಧಿಕಾರಿ ಹುದ್ದೆ ಖಾಲಿ ಇರುವ ಪಶುವೈದ್ಯ ಸಂಸ್ಥೆಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿವೆ ಹಾಗೂ ಸದರಿ ಸ್ಥಳಗಳಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಲಾಗಿರುತ್ತದೆ | | | |

**ಸಂ: ಪಸಂಮೀ 149 ಪಸಸೇ 2018**

**(ವೆಂಕಟರಾವ್ ನಾಡಗೌಡ)**
**ಪಶುಸಂಗೋಪನೆ ಹಾಗೂ ಮೀನುಗಾರಿಕೆ ಸಚಿವರು**